**CC No. 218/2020**
DW- 1

**ದಿನಾಂಕಃ 21-09-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ದೂರುದಾರ ಪರ Sri.BKJ ವಕೀಲರಿಂದಃ**

ನಾನು ಯಾವುದಾದರೂ ದಾಖಲಾತಿಗೆ ಸಹಿ ಮಾಡುವ ಮುಂಚೆ ಅದರಲ್ಲಿರುವ ಅಂಶಗಳನ್ನು ಓದಿ ತಿಳಿದುಕೊಂಡು ಸಹಿ ಮಾಡುತ್ತೇನೆ. ಕಾಲಬೈರವ ಆರ್ಟ್ಸ ಲೇಟರ್ ಹೆಡ್ ನ್ನು ನಾನು ಬೇರೆ ಯಾರಿಗೂ ಕೊಟ್ಟಿರುವುದಿಲ್ಲ. ನಿಮ್ಮ ಹಿಂದಿನ ಪಾಟೀ ಸವಾಲಿನಲ್ಲಿ ನಿಪಿ-9 ಖಾಲಿ ಲೇಟರ್ ಹೆಡ್ ಗೆ ಸಹಿ ಮಾಡಿ ದೂರುದಾರನಿಗೆ ಕೊಟ್ಟಿರುವುದಾಗಿ ಹೇಳಿದ್ದು ಹಾಗೇ ಖಾಲಿ ಲೇಟರ್ ಹೆಡ್ ಗೆ ಸಹಿ ಮಾಡುವ ಪ್ರಸಂಗ ಏನು ಇತ್ತು ಎಂಬ ಪ್ರಶ್ನೆಗೆ ಸಾಕ್ಷಿಯು ಸಿನಿಮಾ ಹಂಚಿಕೆ ಹಕ್ಕು ಬೇಕು ಎಂದು ದೂರುದಾರ ಕೇಳಿದ್ದಕ್ಕಾಗಿ ಹಂಚಿಕೆ ಹಕ್ಕಿನ ವಿಚಾರವಾಗಿ ದೂರುದಾರನಿಗೆ ಖಾಲಿ ಲೇಟರ್ ಹೆಡ್ ಗೆ ಸಹಿ ಮಾಡಿ ಕೊಟ್ಟಿರುತ್ತೇನೆ. ನನ್ನ ಮತ್ತು ದೂರುದಾರನಿಗೆ 500 ರಿಂದ 600 ಕಿ ಮೀ ಅಂತರ ಇರುವುದರಿಂದ ಬೇಕಾಗುತ್ತದೆ ಎಂದು ದೂರುದಾರ ನನ್ನಿಂದ ಖಾಲಿ ಲೇಟರ್ ಹೆಡ್ ಗಳನ್ನು ಪಡೆದುಕೊಂಡಿರುತ್ತಾನೆ. ನಾನು ದೂರುದಾರನಿಗೆ ನನ್ನ ವಕೀಲರ ಮುಖಾಂತರ ನೀಡಿದ ಪ್ರತ್ಯುತ್ತರ ನೊಟೀಸನಲ್ಲಿ ದೂರುದಾರನಿಗೆ ಖಾಲಿ ಲೇಟರ್ ಹೆಡ್ ನ್ನು ಕೊಟ್ಟಿರುವ ಬಗ್ಗೆ ಹೇಳಿರುವುದಿಲ್ಲ.

ಖಾಲಿ ಲೇಟರ್ ಹೆಡ್ ನ್ನು ದೂರುದಾರ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ನಾನು ಯಾವುದೇ ದೂರು ಸಲ್ಲಿಸಿರುವುದಿಲ್ಲ ಕಾರಣ ಪ್ರಸ್ತುತ ಪ್ರಕರಣ ನಡೆದ 2 ವರ್ಷಗಳ ನಂತರ ದೂರುದಾರ ಇದನ್ನು ಮಾನ್ಯ ನ್ಯಾ ಕ್ಕೆ ಹಾಜರುಪಡಿಸಿರುತ್ತಾನೆ. ಈ ದಿನದವರೆಗೂ ಖಾಲಿ ಲೇಟರ್ ಹೆಡ್ ನ್ನು ದೂರುದಾರ ದುರುಪಯೋಗಪಡಿಸಿಕೊಂಡಿರುವ ಬಗ್ಗೆ ಮಾನ್ಯ ನ್ಯಾ ದಲ್ಲಿ ಮತ್ತು ಯಾವುದೇ ಠಾಣೆಯಲ್ಲಿ ದೂರು ಸಲ್ಲಿಸಿರುವುದಿಲ್ಲ. ನಾನು ನಿಪಿ-9 ರಂತಹ ಒಟ್ಟು 3 ಖಾಲಿ ಲೇಟರ್ ಹೆಡ್ ಗಳಿಗೆ ಸಹಿ ಮಾಡಿ ದೂರುದಾರನಿಗೆ ಕೊಟ್ಟಿರುತ್ತೇನೆ. ನಿಪಿ-9 ನ್ನು ನಾನೇ ದೂರುದಾರನಿಗೆ ದಿಃ 18-12-2016 ರಂದು ಹಣ ಮುಟ್ಟಿರುವ ಬಗ್ಗೆ ಸಾಕ್ಷಿದಾರರ ಸಮಕ್ಷಮ ಸಹಿ ಮಾಡಿ ಸ್ವೀಕೃತಿಯಾಗಿ ಕೊಟ್ಟಿರುತ್ತೇನೆಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದು ಸೃಷ್ಟಿಸಿದ ದಾಖಲಾತಿಯಾಗಿರುತ್ತದೆ ಎಂದು ನುಡಿಯುತ್ತಾರೆ.

ಪ್ರಸ್ತುತ ಪ್ರಕರಣದಲ್ಲಿ ಗುರುಪಾದಪ್ಪ ಭೀಮಪ್ಪ ಬಿರಾದಾರ ದೂರುದಾರನ ಪರವಾಗಿ PW-2 ಎಂದು ನಿಪಿ-9 ರ ಬಗ್ಗೆ ಸಾಕ್ಷಿ ನುಡಿದಿರುತ್ತಾರೆಂದರೆ ದೂರುದಾರ ಮತ್ತು PW-2 ಸಂಬಂಧಿಕರಾಗಿದ್ದು ಆತ ಸುಳ್ಳು ಸಾಕ್ಷ್ಯ ನುಡಿದಿರುತ್ತಾನೆ. ದೂರುದಾರ ಮತ್ತು PW-2 ಬೇರೆ ಬೇರೆ ಅಡ್ಡ ಹೆಸರನ್ನು ಹೊಂದಿದ್ದು ಅವರು ಸಂಬಂಧಿಕರಾಗಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ಇನ್ನುಳಿದ ಇಬ್ಬರು ಸಾಕ್ಷಿದಾರರಾದ ಗಿರಿಮಲ್ಲಪ್ಪ ಮಹಾದೇವ ಪಾಟೀಲ ಮತ್ತು ಶಿವಬಸ್ಸು ಬಸಪ್ಪ ನೇಮಗೌಡರ ಸಹಿ ಮಾಡಿದ್ದು ಅವರ ಸಾಕ್ಷ್ಯವನ್ನು ನಿಮ್ಮ

ಪರವಾಗಿ ಮಾಡಿಸುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಸಾಕ್ಷ್ಯ ಮಾಡಿಸುವುದಿಲ್ಲ ಎಂದು ನುಡಿಯುತ್ತಾರೆ. ನಾನು ನಿಪಿ-9 ನ್ನು ಕಾನೂನುಬದ್ಧವಾಗಿ ದೂರುದಾರನಿಗೆ ಮಾಡಿಕೊಟ್ಟಿರುವುದರಿಂದ ಯಾವುದೇ ಮಾನ್ಯ ನ್ಯಾದಲ್ಲಿ ಪ್ರಶ್ನಿಸಿರುವುದಿಲ್ಲ ಎಂದರೆ ಸೃಷ್ಟಿ ಮಾಡಿದ ದಾಖಲೆಯಾಗಿದ್ದು ಈ ಬಗ್ಗೆ ನಂತರದಲ್ಲಿ ನನಗೆ ತಿಳಿದಿದ್ದರಿಂದ ದೂರು ಸಲ್ಲಿಸಿರುವುದಿಲ್ಲ.

ನಾನು ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ರೂ.2,50,000/- ಗಳನ್ನು ದೂರುದಾರನಿಗೆ ವಾಪಸ್ ನೀಡಿರುವುದಾಗಿ ಹೇಳಿರುತ್ತೇನೆ. ನಿಮ್ಮ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ದೂರುದಾರ ನಿಮಗೆ ನೀಡಿದ್ದ ರೂ.2.10 ಲಕ್ಷ ಗಳನ್ನು ವಾಪಸ್ ಕೊಡುವಂತೆ ಕೇಳಿದಾಗ ಒಟ್ಟು ರೂ.2.50 ಲಕ್ಷ ಗಳನ್ನು ಕೊಟ್ಟಿರುತ್ತೇನೆಂದು ಹೇಳಿದ್ದು ರೂ.40 ಸಾವಿರ ಗಳನ್ನು ದೂರುದಾರನಿಗೆ ಹೆಚ್ಚಿ ನ ಹಣ ನೀಡಲು ಕಾರಣ ಏನು ಎಂಬ ಪ್ರಶ್ನೆಗೆ ಸಾಕ್ಷಿಯು 5 ವರ್ಷಗಳ ನಂತರ ಹಣ ಮರಳಿ ಕೊಟ್ಟಿದ್ದಕ್ಕಾಗಿ ರೂ.40 ಸಾವಿರ ಗಳನ್ನು ನಾನೇ ಸ್ವತಃ ಹೆಚ್ಚಿ ನ ಹಣವನ್ನು ದೂರುದಾರನಿಗೆ ನೀಡಿರುತ್ತೇನೆಂದು ಸಾಕ್ಷಿ ನುಡಿಯುತ್ತಾರೆ. ಹೆಚ್ಚಿನ ರೂ. 40 ಸಾವಿರ ಹಣವನ್ನು ಬಡ್ಡಿ ರೂಪದಲ್ಲಿ ಅಥವಾ ಯಾವ ರೂಪದಲ್ಲಿ ನೀಡಿದ್ದಿರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹಾಗೇ ಕೊಟ್ಟಿರುತ್ತೇನೆಂದು ನುಡಿಯುತ್ತಾರೆ. ರೂ. 40 ಸಾವಿರ ಹೆಚ್ಚಿನ ಹಣವನ್ನು ದೂರುದಾರನಿಗೆ ನೀಡಿದ್ದೇನೆಂದು ನನ್ನ ಪ್ರತ್ಯುತ್ತರ ನೊಟೀಸನಲ್ಲಿ ಹೇಳಿರುವುದಿಲ್ಲ ಎಂದರೆ ಸರಿ.

ನನ್ನ ಮತ್ತು ದೂರುದಾರನ ನಡುವೆ ಶೇ. 30 ರಷ್ಟು commission ಗಾಗಿ agreement ಆಗಿತ್ತು ಎಂದು ತೋರಿಸಲು ಮಾನ್ಯ ನ್ಯಾ ಕ್ಕೆ ದಾಖಲಾತಿ ಹಾಜರುಪಡಿಸಿದ್ದೀರಾ ಎಂಬ ಪ್ರಶ್ನೆಗೆ ಸದರಿ ದಾಖಲಾತಿ ದೂರುದಾರನ ಹತ್ತಿರ ಇದ್ದು ಆತ ಅದನ್ನು ಹರಿದುಹಾಕಿದ್ದು ನನ್ನ ಹತ್ತಿರ ಸದರಿ ದಾಖಲಾತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಯ ನಕಲು ಪ್ರತಿಯೂ ಕೂಡ ನನ್ನಲ್ಲಿ ಇರುವುದಿಲ್ಲ. ಸಾಮಾನ್ಯವಾಗಿ ಇಬ್ಬರು ವ್ಯಕ್ತಿಗಳ ನಡುವೆ agreement ಆದ ಅದರ ಪ್ರತಿಗಳು ಇಬ್ಬರ ಹತ್ತಿರ ಇರುತ್ತವೆ ಎಂದರೆ ಸರಿ. ಪಂಥ್ಯ ಸಿನಿಮಾ ಹಂಚಿಕೆಯ ಹಕ್ಕು agreement ಆಗಿದ್ದರೆ ಹಂಚಿಕೆದಾರರಿಗೆ ಸದರಿ agreement copy ಯನ್ನು ಕೊಡುತ್ತೇವೆ ಎಂದರೆ ಸರಿ. ಪಂಥ್ಯ ಸಿನಿಮಾದ ಹಂಚಿಕೆದಾರರು Arya Mourya company ಆಗಿರುತ್ತದೆ. Arya Mourya company ಹತ್ತಿರ agreement copy ಇರುತ್ತದೆ ಎಂದರೆ ಸರಿಯಲ್ಲ. ದೂರುದಾರನ ಹತ್ತಿರ ಇರುವ ಸಿನಿಮಾ ಹಂಚಿಕೆಯ agreement copy ಯನ್ನು ಮಾನ್ಯ ನ್ಯಾ ಕ್ಕೆ ಹಾಜರುಪಡಿಸುವಂತೆ ನಾನು ಮಾನ್ಯ ನ್ಯಾ ಕ್ಕೆ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ.

ನಾನು ದೂರುದಾರನಿಗೆ ಹಣ ಕೊಡಬೇಕಾಗುತ್ತದೆ ಎಂದು ದೂರುದಾರ ದಾಖಲಾತಿಗಳನ್ನು ಸೃಷ್ಟಿಸಿದ್ದಾನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೂರಿನಲ್ಲಿಪಿರ್ಯಾದಿದಾರ ನನಗೆ ಎಷ್ಟು ಹಣ ಕೊಟ್ಟಿದ್ದಾನೆಂದು ವಿವರವಾಗಿ ನಮೂದಿಸಿದ್ದಾನೆಂದರೆ ದೂರುದಾರ ನನಗೆ ರೂ.2.10 ಲಕ್ಷ ಮಾತ್ರ ಕೊಟ್ಟಿರುತ್ತಾನೆಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ದೂರುದಾರ ಪರ ವಕೀಲರು ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.